ಕಾಡಿನ ಕಣ್ಣು

**ಕಲೀಮ್ ಉಲ್ಲಾ**



# ಮಿನ್ಲಾ ಎಂಬ ಪುಟಾಣಿ ಹಕ್ಕಿಯ ಕೊಲ್ಲುವ ಕಥೆ

ನಮ್ಮ ಜನ ಸಮುದಾಯದಲ್ಲಿ ಕೆಲ ಹಕ್ಕಿಗಳನ್ನು ಹೊಡೆದು ತಿಂದರೆ ಕಾಯಿಲೆಗಳು ವಾಸಿಯಾಗುತ್ತವೆ ಎಂಬ ಮೂಢನಂಬಿಕೆ ಚಾಲ್ತಿಯಲ್ಲಿವೆ. ಹಕ್ಕಿಗಳ ಸರ್ವನಾಶಕ್ಕೆ ಇದೂ ಒಂದು ಕಾರಣವಿದ್ದೀತು. ಬಿಜಯ್ ನಂತಹ ಜನ ಶಿಕಾರಿ ಶೋಕಿಗೆ, ನಾಲಿಗೆ ಚಪಲಕ್ಕೆ, ನಂತರ ಅದನ್ನೇ ದಂಧೆಗೆ ಬಳಸಿಕೊಂಡವರು. ನಿಸರ್ಗದ ಜೈವಿಕ ಅಂಶಗಳನ್ನು ತಿಂದುಂಡು ಬೆಳೆಯುವ ಹಕ್ಕಿಗಳನ್ನು ನಾವು ಬಡಿದು ಸವಿದರೆ ದೈಹಿಕವಾಗಿ ನಾವು ಶಕ್ತಿಶಾಲಿಗಳಾಗುತ್ತೇವೆ ಎಂಬ ಭ್ರಮೆ ಅನೇಕ ಜನರಲ್ಲಿದೆ.

ಹಕ್ಕಿಗಳ ತೋರಿಸಲು ಬಂದಿದ್ದ ಬಿಜಯ್ ಮಗರ ಎಂಬಾತ ತುಂಬಾ ಕುತೂಹಲದ ವ್ಯಕ್ತಿಯಾಗಿದ್ದ. ತಾನು ಮಗರ ಬುಡಕಟ್ಟು ಸಮುದಾಯಕ್ಕೆ ಸೇರಿದವನೆಂದೂ, ಭಾರತೀಯ ಸೈನ್ಯದ ಗೋರಕ ಪಡೆಯಲ್ಲಿ ತನ್ನ ಸಮುದಾಯ ಹುಡುಗರೇ ಹೆಚ್ಚಾಗಿ ಇರುವರೆಂದೂ ಹೇಳಿದ. ಡಾರ್ಜಲಿಂಗ್ ಚಳಿಗೆ ಸೀದು ಸಣಕಲನಾಗಿರುವ ನನಗೆ ಮಿಲಿಟರಿಯಲ್ಲಿ ಅವಕಾಶ ಸಿಗಲಿಲ್ಲವೆಂದೂ ಹೇಳಿದ. ಬೀಡಿ ಜಡಿದು, ಗುಟ್ಕಾ ಅಗೆದು, ಲಂಗುಲಗಾಮಿಲ್ಲದೆ ಟೀ ಹೀರಿ ಇವನು ಒಣಗಿಯೇ ಹೋಗಿದ್ದ. ಬೆಟ್ಟದ ಮೇಲೆ ಬೀಸುವ ದೊಡ್ಡಗಾಳಿಗೆ ಇವನು ಸಿಕ್ಕಿ ತರಗಲೆಯಂತೆ ಹಾರಿ ಹೋಗದೆ ಉಳಿದದ್ದೇ ಒಂದು ವಿಶೇಷವಾಗಿ ಕಾಣುತ್ತಿತ್ತು. ಇವನ ಮಾತು, ನಗೆ ಎಲ್ಲವೂ ವಿಚಿತ್ರ ಎನಿಸುತ್ತಿದ್ದವು. ಹೆಚ್ಚು ಸಲುಗೆ ಬಳಸಿ ಹತ್ತಿರವಾಗಲು ಈತ ಇಚ್ಛಿಸುತ್ತಿದ್ದ. ಹಳೆಯ ಪರಿಚಯಸ್ಥರು ಸಿಕ್ಕಂತೆ ಸಂಭ್ರಮಿಸುತ್ತಿದ್ದ. ಇವನ ಈ ವರ್ತನೆಗೆ ಕೆಲ ಫೋಟೊಗ್ರಾಫರ್‌ಗಳು ಹಿಂಜರಿಕೆ ತೋರುತ್ತಿದ್ದರು. ಗುಮಾನಿಯಿಂದ ಒಮ್ಮೆ ಇವನ ಮುಸುಡಿ ಗುರಾಯಿಸುತ್ತಿದ್ದರು. ಇವನು ಹುಚ್ಚನಂತೆ ಮುಸಿಮುಸಿ ನಗುತ್ತಿದ್ದ. ಇವನು ರೂಪುಗೊಂಡಿರುವುದೇ ಹೀಗೆ. ಸಭ್ಯ ಮನುಷ್ಯನೊಬ್ಬ ಬಡವನೂ, ಕಿರುಕುಡುಕನೂ, ಹರಕು ಮುರುಕು ಬಟ್ಟೆ ತೊಟ್ಟವನೂ ಆದರೆ ಯಾವ ಜನರೂ ನಂಬುವುದಿಲ್ಲ.

ನಾನು ಪ್ರವಾಸದಲ್ಲಿ ಇಂತಹ ಪ್ರತಿಭೆಗಳನ್ನೇ ಹೆಚ್ಚಾಗಿ ಹುಡುಕುತ್ತೇನೆ. ಮೇಲುನೋಟದಲ್ಲಿ ಶುದ್ಧ ತರಲೆಗಳಂತೆ ಕಂಡರೂ ಅಗಾಧ ಪ್ರಮಾಣದ ಜ್ಞಾನ ಇವರಲ್ಲಿರುತ್ತದೆ. ಮಿಂಚಿನ ವೇಗದಲ್ಲಿ ಇವನ ಗೆಳೆತನದ ಸೆಲೆ ಹುಡುಕಿಕೊಂಡೆ. ಒಂದು ಕಿರುನಗೆ, ಹೆಗಲ ಮೇಲೆ ಕೈಯಿಟ್ಟು ನುಡಿಯುವ ನಲ್ಮಾತು ಸಾಕಾಗಿತ್ತು. ಅವಮಾನ ಮತ್ತು ತಾತ್ಸಾರಕ್ಕೆ ಸಿಲುಕಿದ ಮನುಷ್ಯ ಸಣ್ಣ ಗೌರವ ಸಿಕ್ಕರೂ ಹೂವಿನಂತೆ ಅರಳಿ ನಿಲ್ಲುತ್ತಾನೆ. ಅವನೇ ಬಿಸಿ ಟೀ ತಂದು ಕೊಟ್ಟ. ಬಿಸ್ಕತ್, ಬ್ರೆಡ್ ಏನಾದರೂ ಬೇಕೆ? ಎಂದು ವಿಚಾರಿಸಿದ. ನಂತರ ಬೆಟ್ಟದ ಕೆಳಗೆ ಒಂದು ಝರಿಯ ಹತ್ತಿರ ನಡೆಯುವುದಿತ್ತು. ಮಳೆ ಬಿದ್ದು ದಾರಿ ಕೆಸರಾಗಿತ್ತು. ಜಾರಿ ಬೀಳುವ ಎಲ್ಲಾ ಅವಕಾಶಗಳು ಹೇರಳವಾಗಿದ್ದವು. ಜೊತೆಗೆ ಲೀಚುಗಳ ಹಾವಳಿ ವಿಪರೀತ. ಆತ ನನ್ನ ಬ್ಯಾಗು ಮತ್ತು ಟ್ರೈ ಪ್ಯಾಡು ಹೊತ್ತು ಇಳಿಜಾರಿನ ದಾರಿಯಲ್ಲಿ ಇಳಿಯುತ್ತಿದ್ದ. ನಾನು ಮಾತಿಗೆ ಎಳಕೊಂಡೆ. ಅವನೂ ಮನಬಿಚ್ಚಿ ಹಗುರಾಗಲು ಅದೆಷ್ಟೋ ವರ್ಷದಿಂದ ಕಾಯುತ್ತಿದ್ದ ಎನ್ನುವಂತೆ ಶುರುವಾದ.